ಹೇಳಿದರು. ಅಪಾಯಿಂಟ್‌ಮೆಂಟ್ ಲೆಟರ್ ಪರಾಂಬರಿಸಿ ಕಾಲಿಂಗ್‌ಬೆಲ್ ಒತ್ತಿ ಫೈಲು ತರಿಸಿ 'ಮಿಸ್ ಚಂಚಲರನ್ನು ಕರೆ' ಎಂದು ಪೀಯೋನಿಗೆ ನಿರ್ದೇಶಿಸಿದಾಗ ಭೂಮಿಯು ಒಮ್ಮೆ ಕಾಲಡಿಯಲ್ಲಿ ಅಲ್ಲಾಡಿದಂತೆ ವೆಂಕಟರಮಣನಿಗನಿಸಿ, ಚಂಚಲೆ ಬಂದು ನಿಂತೊಡನೆ ರೋಡ್ರಿಗ್ಸ್ 'ನೋಡಿ, ಇವರು ಮಿಸ್ಟರ್ ರಮಣ್. ನಿಮ್ಮ ಸೆಕ್ಷನ್ ತೋರಿಸಿ, ಈ ಫೈಲು ಕೂಡಾ ತೆಗೆದುಕೊಳ್ಳಿ' ಎಂದು ಹೇಳಿ. 'ಗುಡ್‌ಲಕ್ ಮಿ. ರಮಣ್' ಎಂದು ವೆಂಕಟರಮಣನ ಕಡೆಗೆ ನೋಡಿ ಅಂದರು. ವೆಂಕಟರಮಣ ಮಂತ್ರಮುಗ್ಧನಂತೆ ಎದ್ದು ಚಂಚಲೆಯ ಹಿಂದೆ 'ಹಾಯ್ ವಿಧಿಯೆ, ಈ ಗರ್ವದ ಹೇಂಟೆ, ಹೆಮ್ಮೆಯೆ ಎಮ್ಮೆ, ಸಿರಿತನದ ಅಹಂಕಾರಿಯ ಕೈಕೆಳಗೆ ದುಡಿಯುವ ಪರಿಸ್ಥಿತಿಗೆ ನನ್ನನ್ನು ದೂಡಿದೆಯಲ್ಲವೆ' ಎಂದು ತಪಿಸುತ್ತಾ, ತನ್ನನ್ನೇ ಶಪಿಸಿಕೊಳ್ಳುತ್ತಾ ಹೆಜ್ಜೆ ಹಾಕಿದ.

ಕೆಲಸ ದೊರಕಿದ ತೃಪ್ತಿಯೊಂದಿಗೆ ತನ್ನ ಕ್ಲಾಸಿನಲ್ಲೇ ಆಚೆ ಬೆಂಚಿನಲ್ಲಿ ಕುಳಿತುಕೊಂಡು ನಲ್ವತ್ತು ಮಾರ್ಕು ತೆಗೆದುಕೊಂಡು ಬಿ.ಎ.ಯನ್ನು ಹೇಗೆ ಹೇಗೋ ಮುಗಿಸಿದ್ದ ಹುಡುಗಿ ಆಫೀಸರ್ ಆಗಿ ಅವಳ ಕೈಕೆಳಗೆ, ಅವಳ ಮೂಗಿನ ನೇರಕ್ಕೆ ತಾನು ಕ್ಲಾರ್ಕನಾಗಿ ದುಡಿಯಬೇಕಾಗಿ ಬಂದ ನಾಚಿಕೆಗೇಡಿನ ಪರಿಸ್ಥಿತಿ! ಅವಳ ಪ್ರೇಮಕ್ಕಾಗಿ ಪರದಾಡಿ ಭಗ್ನತೆಯನ್ನನುಭವಿಸಿ ಪೀಯೋನು ಮಗ ಸ್ಯಾನಿಟರಿ ಇನ್ಸ್‌ಪೆಕ್ಟರನ ಮಗಳನ್ನು ಮದುವೆಯಾಗುವುದು ಸಿನಿಮದೊಳಗಣ ಕತೆಯಲ್ಲಿ ಮಾತ್ರ ಎಂಬ ಕಟುಸತ್ಯವನ್ನು ಅರ್ಥಮಾಡಿಕೊಂಡ ಮೇಲೆ ಉದ್ಯೋಗಕ್ಕಾಗಿ ನಡೆಸಿದ ಜೀವನ್ಮರಣ ಹೋರಾಟದಲ್ಲಿ ಪ್ರೇಮ–ಮದುವೆಗಳ ಯೋಚನೆಯನ್ನು ಪುಡಿಗೈದಿದ್ದ ವೆಂಕಟರಮಣ, ಪರಮಾತ್ಮನ ಮೇಲೆಯೇ ವಿಶ್ವಾಸವನ್ನು ಕಳೆದುಕೊಳ್ಳುತ್ತಿದ್ದ ಹೊತ್ತಿನಲ್ಲಿ 'ಬದುಕಿಕೊಳ್ಳಪ್ಪ' ಎಂದು ಶ್ರೀಕೃಷ್ಣನೇ ಒಂದು ಆರ್ಡರ್ ಹೊರಡಿಸಿದ್ದನ್ನು ನೆನೆದು ಅತೃಪ್ತಿ ಅಸಮಾಧಾನಗಳನ್ನೆಲ್ಲಾ ಎದೆಯೊಳಗೆ ಹುಗಿದು ಮೇಲೆ ತೃಪ್ತಿಯ ಪರದೆಯನ್ನು ಇಳಿಬಿಟ್ಟ. ಆದರೂ ಚಂಚಲೆಯಿಂದ ಅವಮಾನಿತನಾಗಿ, ಅವಳ ಆಜ್ಞೆಯನ್ನು ಪರಿಪಾಲಿಸಬೇಕಾಗಿ ಬಂದಿರುವುದು ವೆಂಕಟರಮಣನನ್ನು ಹಿಂಸಿಸತೊಡಗಿದ್ದಲ್ಲದೆ ಫಸ್ಟ್‌ಕ್ಲಾಸಿನಲ್ಲಿ ಪಾಸಾದ ತನ್ನ ಮೇಲೆ ಯಃಕಶ್ಚಿತ್ ಥರ್ಡ್ ಕ್ಲಾಸಿನಲ್ಲಿ ಹೇಗಾದರೂ ಮೇಲೆ ಬಿದ್ದ ಒಬ್ಬಳು. ಹೆಣ್ಣು, ಕಾರುಬಾರು ಮಾಡುವುದು ಅವನ ಗಂಡಸುತನಕ್ಕೆ ಅತಿದೊಡ್ಡ ಏಟು ಎನಿಸಿತು.



ಕ್ರಮೇಣ ಹೀಗೆಂತ ನನ್ನ ಹಣೆಯಲ್ಲಿ ಬರೆದಿದ್ದರೆ ಏನು ತಾನೆ ಮಾಡಲು ಸಾಧ್ಯ? ಎಂದು ಫೇಟಲಿಸಂನ್ನು ಅಪ್ಪಿಕೊಂಡು, ನಿಕೃಷ್ಟವಾದುದರಲ್ಲೇ ಶ್ರೇಷ್ಠತೆಯನ್ನು ಸೃಷ್ಟಿಸುವ ಪ್ರಯತ್ನ ನಡೆಸೋಣವೆಂದುಕೊಂಡ. ಸಾಧ್ಯವಾದರೆ ಈಗಲೂ ಚಂಚಲೆಯ ಹಸ್ತಕ್ಕಾಗಿ ಯಾಕೆ ಅಟೆಮ್ಟ್ ಮಾಡಬಾರದು? ತನ್ನಲ್ಲಿ ರೂಪವಿದೆ, ಗುಣವಿದೆ, ಆರೋಗ್ಯವಿದೆ, ಜ್ಞಾನವಿದೆ, ಇಂದು ಕ್ಲಾರ್ಕನಾಗಿದ್ದರೇನಾಯ್ತು. ಒಂದು ದಿನ ತಾನೂ ಪ್ರೊಮೋಷನ್ ಪಡೆಯುತ್ತೇನೆ. ಅಲ್ಲದೆ ತಾನು ಪ್ರಯತ್ನಿಸುತ್ತಿರುವ ಮೇಲಿನ ಉದ್ಯೋಗಗಳಲ್ಲಿ ಯಾವುದಾದರೊಂದು ಸಿಗುತ್ತದೆ– ಎಂದುಕೊಂಡ. ಇಷ್ಟುಮಾತ್ರವಲ್ಲದೆ ಯೋಗ್ಯತೆಯನ್ನು ನೋಡಿದರೆ ನಾನೇ ಆಫೀಸರನಾಗಬೇಕು. ಇವಳು ಕ್ಲಾರ್ಕ್‌ತನಕ್ಕೆ ಮಾತ್ರ ಯೋಗ್ಯಳು, ಇವಳು ಇನ್‌ಫ್ಲುಯೆನ್ಸಿನಿಂದ ಮೇಲು ಖರ್ಚಿಗಾಗಿ ಪಡೆದ ಉದ್ಯೋಗ, ತನ್ನ ಯೋಗ್ಯತೆಗೆ ಬಹಳ ಸಣ್ಣದಾದರೂ ತಾನು ಯೋಗ್ಯತೆಯ ಮೂಲಕವೇ ಪಡೆದುದು – ಎಂದು ವೆಂಕಟರಮಣ